ಒಂದನೇ ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

ಸ್ಪೆಷಲ್ ಕೇಸ್ ನಂಃ **205/2023**

| | ಚಾಸಾಃ **8** | ಅಸಾಃ **8** |
|---|---|---|
| ಹೆಸರು | ಮುರಳಿ | |
| ತಂದೆಯ ಹೆಸರು : | ಮೊಗಪ್ಪಗೌಡ | |
| ವಯಸ್ಸು: | 48 ವರ್ಷ | |
| ಕೆಲಸಃ | ಮುಖ್ಯ ಪೇದೆ, ಶಾಂತಿಗ್ರಾಮ ಪೊ.ಠಾ | |
| ವಾಸಸ್ಥಳ | ಹಾಸನ | |

ದಿನಾಂಕಃ **12/12/2025** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು ದಿ. 13.02.2017 ರಿಂದ 23.06.2022 ರವರೆಗೆ ನಾನು ದುದ್ದ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ. 17.10.2019 ರಂದು ಚಾಸಾ-9 ರವರು ಹಾಸನ ಎಸ್ ಎಸ್ ಎಂ ಆಸ್ಪತ್ರೆಯಿಂದ ಚಾಸಾ-1 ರವರ ಹೇಳಿಕೆ ಮಾಡಿಕೊಂಡು ಬರಲು ಹೇಳಿದ್ದು, ನಾನು ಆಸ್ಪತ್ರೆಗೆ ಭೇಟಿ ನೀಡಿ, ಸಂಜೆ 5.15 ಕ್ಕೆ ಮೆಮೊ ಪಡೆದು, ಸಂಜೆ 5.30-6.00 ತನಕ ಚಾಸಾ-1 ರವರ ಹೇಳಿಕೆ ಪಡೆದು, ಸಂಜೆ 7.00 ಗಂಟೆಗೆ ಚಾಸಾ-9 ರವರ ಮುಂದೆ ಹಾಜರಾಗಿ ಮೆಮೊ ಮತ್ತು ಹೇಳಿಕೆಯನ್ನು ಹಾಜರುಪಡಿಸಿರುತ್ತೇನೆ. ನಿಪಿ-1 ರಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು, ನಿಪಿ-1(ಎ) ಎಂದು ಗುರುತಿಸಲಾಯಿತು. ಮೆಮೊವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಮೆಮೊವನ್ನು ನಿಪಿ-7 ಎಂದು ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ಘಟನೆ ಬಗ್ಗೆ ಬೇರೆಯವರು ಬಂದು ಠಾಣೆಗೆ ದೂರು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಚಾಸಾ-1 ರವರು ಆಸ್ಪತ್ರೆಯಲ್ಲಿದ್ದಾಗ ಬೇರೆ ಯಾರು ಇದ್ದರು

ಎಂದು ಗೊತ್ತಿಲ್ಲ. ನಾನು ಅವರನ್ನು ಹೊರತುಪಡಿಸಿ ಅವರ ಜೊತೆ ಬೇರೆ ಯಾರು ಬಂದಿದ್ದಾರೆ ಎಂದು ಕೇಳಿಲ್ಲ. ಚಾಸಾ-1 ರವರು ಘಟನೆ ಬಗ್ಗೆ ನನ್ನ ಮುಂದೆ ಹೇಳಿಕೆ ಕೊಟಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಅವರು ಹೇಳಿಕೆ ಕೊಡದೇ ಇದ್ದರೂ ಕೂಡ ಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು ಯಾವುದೇ ಹೇಳಿಕೆ ಕೊಡದೇ ಇದ್ದರೂ ಸಹಾ ಠಾಣಾ ಅಂಕಿಅಂಶಕ್ಕೋಸ್ಕರ ಸುಳ್ಳು ಹೇಳಿಕೆ ಪಡೆದಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಾಡಿರುವ ಹೇಳಿಕೆಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಯವರ ಮಾತನ್ನು ಕೇಳಿಕೊಂಡು ಆರೋಪಿತರ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಒಂದನೇ ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ